




ಮೊಹರಮ್ ತಿಂಗಳ ಮೊದಲ ದಿನವನ್ನು ವರ್ಷದ ಆರಂಭವಾಗಿ ಗುರುತಿಸಿಕೊಂಡಿರುವ ಇಸ್ಲಾಂ ಧರ್ಮದಲ್ಲಿ ಆ ತಿಂಗಳ ಮಹತ್ವದ ಘಟನೆಗಳನ್ನು ನೆನಪಿಸಿಕೊಳ್ಳಲಾಗುತ್ತದೆ.

ಬ್ಯಾಬಿಲೋನಿಯಾದ ಜನರು ವರ್ಷದ ಆರಂಭದಲ್ಲಿ ತಾವು ಕಡ ತಂದ ವಸ್ತುಗಳನ್ನು ಮತ್ತು ಸಾಲ ಪಡೆದ ಹಣವನ್ನು ಹಿಂತಿರುಗಿಸುತ್ತೇವೆ ಎಂದು ದೇವರ ಎದುರು ಪ್ರಮಾಣ ಮಾಡುತ್ತಿದ್ದರು ಎಂದು ಇತಿಹಾಸ ಹೇಳುತ್ತದೆ. ರೋಮನ್ನರು ಜನಸ್ ಎನ್ನುವ ದೇವರ ಮುಂದೆ (ಇದೇ ಹೆಸರಿನಿಂದ ಜನವರಿ ತಿಂಗಳ ಹೆಸರು ಹುಟ್ಟಿದೆ) ತಾವು ಆ ವರ್ಷದಲ್ಲಿ ಮಾಡುವ ಕೆಲಸಗಳ ಬಗೆಗೆ ಪ್ರಮಾಣ ಮಾಡುತ್ತಿದ್ದರಂತೆ. ಸಾಕಷ್ಟು ಪಾಶ್ಚಿಮಾತ್ಯ ದೇಶಗಳಲ್ಲಿ ವರ್ಷಾಂತ್ಯಕ್ಕೆ ಮೊದಲು ಕ್ರಿಸ್ಮಸ್ ಹಬ್ಬ ಆಚರಿಸುವ ಜನರು, ಆಯಾ ವರ್ಷ ಮಾಡಿದ ತಪ್ಪುಗಳಿಗೆ ದೇವರ ಕ್ಷಮೆ ಯಾಚಿಸಿ ಮುಂದಿನ ವರ್ಷ ಒಳ್ಳೆಯ ಕೆಲಸಗಳನ್ನು ಮಾಡುವ ನಿರ್ಧಾರದೊಂದಿಗೆ ಹೊಸ ವರ್ಷವನ್ನು ಆರಂಭಿಸುತ್ತಿದ್ದರು.

ಅಂದರೆ ಹೊಸ ವರ್ಷದ ನಿರ್ಧಾರಗಳ ಮೂಲ ಉದ್ದೇಶ ಹಿಂದಿನ ತಪ್ಪುಗಳ ಅರಿವನ್ನು ಮೂಡಿಸಿಕೊಂಡು ಬದಲಾದ ಉತ್ತಮ ಗುಣಗಳ ವ್ಯಕ್ತಿಯಾಗಿ ಆ ವರ್ಷದಲ್ಲಿ ಏನೇನು ಕೆಲಸಗಳನ್ನು ಮಾಡಬೇಕು ಎನ್ನುವುದರ ಬಗೆಗೆ ಯೋಚಿಸುವುದು. ವ್ಯಾಪಾರ ವ್ಯವಹಾರಗಳಲ್ಲಿ ವರ್ಷಾಂತ್ಯಕ್ಕೆ ಆ ವರ್ಷದ ಲಾಭ– ನಷ್ಟಗಳ ಬ್ಯಾಲೆನ್ಸ್ ಷೀಟ್ ತಯಾರಿಸಿ ಮುಂದಿನ ವರ್ಷಕ್ಕಾಗಿ ಯೋಜನೆ ಹಾಕಿಕೊಳ್ಳುವಂತೆ, ವ್ಯಕ್ತಿಯೊಬ್ಬ ತನ್ನ ಜೀವನದಲ್ಲಿ ತಾನೆಲ್ಲಿದ್ದೇನೆ ಎಂದು ಗುರುತಿಸಿಕೊಳ್ಳಲು ಇಂತಹ ನಿರ್ಧಾರಗಳನ್ನು ಉಪಯೋಗಿಸಬಹುದಿತ್ತು. ಈ ಪ್ರಕ್ರಿಯೆ ಪೂರ್ಣ ನಿಷ್ಠೆಯಿಂದ ನಡೆದಾಗ ನಮ್ಮ ಬದುಕು ನಿಂತ ನೀರಾಗದೆ ನಿರಂತರವಾಗಿ ಬೆಳೆಯುತ್ತಿರುವ, ಉತ್ತಮಗೊಳ್ಳುತ್ತಿರುವ ಆನಂದ ನಮಗೆ ದೊರಕುವುದು ಸಾಧ್ಯವಾಗುತ್ತದೆ. ಆದರೆ ವಾಸ್ತವದಲ್ಲಿ ಹೀಗಾಗುತ್ತಿದೆಯೇ?

## ಇದೂ ಒಂದು ಫ್ಯಾಷನ್?

ಹೊಸ ವರ್ಷದ ನಿರ್ಧಾರಗಳು ತೀರಾ ವೈಯುಕ್ತಿವಾದವು. ಅದನ್ನು ಮಾಡುವವರು ಮೊದಲು ತಮ್ಮ ಮನಸ್ಸುಗಳನ್ನು ಕೆದಕಿ ನಿರ್ಧಾರವನ್ನು ಜಾರಿಗೊಳಿಸುವ ಪ್ರಾಮಾಣಿಕ ಉದ್ದೇಶವಿದೆಯೇ ಎನ್ನುವುದರ ಬಗೆಗೆ ಯೋಚಿಸಿರಬೇಕು. ಅಂತಹ ಪ್ರಾಮಾಣಿಕತೆ ಇಲ್ಲದಿದ್ದರೆ ನಮ್ಮನ್ನೇ ನಾವು ಮೋಸಗೊಳಿಸಿಕೊಳ್ಳುತ್ತಿರುತ್ತೇವೆ. ನಮ್ಮ 'ಸೆಲೆಬ್ರಿಟಿ'ಗಳು ತಮ್ಮ ಹೊಸ ವರ್ಷದ ನಿರ್ಧಾರಗಳ ಬಗೆಗೆ ಡಿಸೆಂಬರ್– ಜನವರಿ ತಿಂಗಳುಗಳಲ್ಲಿ ದೊಡ್ಡದಾಗಿ 'ಟಾಂ ಟಾಂ' ಮಾಡುತ್ತಾರೆ. ವರ್ಷಾಂತ್ಯದ ಹೊತ್ತಿಗೆ ಇದು ಯಾರಿಗೂ ನೆನಪಿರುವುದಿಲ್ಲ. ಆಗ ಮತ್ತೆ ಮುಂದಿನ ವರ್ಷದ ನಿರ್ಧಾರಗಳ ಬಗೆಗೆ ಮಾತನಾಡುತ್ತಾರೆ. ಹೀಗೆ ಇದೂ ಒಂದು ರೀತಿಯ ಸಂಪ್ರದಾಯವೋ, ಫ್ಯಾಷನ್ನೋ ಆಗುತ್ತಿದೆ. 'ಸೆಲೆಬ್ರಿಟಿ'ಗಳಿಗೆ ಇದು ಮಾರುಕಟ್ಟೆ ಗಳಿಸುವ ತಂತ್ರವಾದರೆ, ನಮಗೆಲ್ಲಾ ನಮ್ಮೊಳಗಿನ ಖಾಲೀತನವನ್ನು ಮುಚ್ಚಿಕೊಳ್ಳುವ ಮಾರ್ಗವಾಗಿದೆ.

## ಎಷ್ಟರ ಮಟ್ಟಿಗೆ ಯಶಸ್ಸು?

ಹೊಸ ವರ್ಷದ ನಿರ್ಧಾರಗಳ ಬಗೆಗೆ ಹೆಚ್ಚು ಮಹತ್ವ ನೀಡುವ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆ ಎನ್ನುವ ಬಗೆಗೆ ಸಮೀಕ್ಷೆಗಳು ನಡೆದಿವೆ. ಇಂತಹ ಒಂದು ಸಮೀಕ್ಷೆಯ ಪ್ರಕಾರ ವೈಫಲ್ಯದ ಕಾರಣಗಳು ಹೀಗಿವೆ;

ಅಸಾಧ್ಯವಾದ ಗುರಿ ಇಟ್ಟುಕೊಂಡಿದ್ದು– 35%
ಅದರ ಬಗೆಗೆ ಗಮನ ಹರಿಸದೆ ಇದ್ದುದು– 33%
ಮರೆತು ಬಿಟ್ಟಿದ್ದು– 23%
ಗುರಿಗಳ ಸಂಖ್ಯೆ ಜಾಸ್ತಿಯಾಗಿದ್ದು – 9%

2007ರಲ್ಲಿ ಇಂಗ್ಲೆಂಡ್‌ನ ಬ್ರಿಸ್ಟಲ್ ವಿಶ್ವವಿದ್ಯಾನಿಲಯ 3000 ಜನರನ್ನು ಒಳಗೊಂಡ ಒಂದು ಸಮೀಕ್ಷೆ ನಡೆಸಿತು. ಇದರ ಪ್ರಕಾರ ಕೇವಲ 52% ಜನರಿಗೆ ತಾವು ತೆಗೆದುಕೊಂಡ ನಿರ್ಧಾರಗಳು ಯಶಸ್ವಿಯಾಗುವ ಭರವಸೆ ಇತ್ತು. ಆದರೆ ಕೊನೆಗೆ ಒಟ್ಟಾರೆ 88% ಜನರು ನಿರ್ಧಾರವನ್ನು ಜಾರಿಗೊಳಿಸುವಲ್ಲಿ ವಿಫಲರಾಗಿದ್ದರು. ಗಂಡಸರಿಗೆ ಗುರಿಗಳ ಬಗೆಗೆ ನಿಖರತೆ ಇದ್ದಾಗ ಅವರು ಯಶಸ್ವಿಯಾಗುವ ಸಾಧ್ಯತೆಗಳು ಹೆಚ್ಚಿದ್ದರೆ, ಹೆಂಗಸರು ತಮ್ಮ ಗುರಿಗಳನ್ನು ಸಾರ್ವಜನಿಕಗೊಳಿಸಿದಾಗ ಮತ್ತು ಅದಕ್ಕೆ ಸ್ನೇಹಿತರ ಬೆಂಬಲ ಸಿಕ್ಕಾಗ ಯಶಸ್ವಿಯಾಗುವ ಸಾಧ್ಯತೆಗಳು ಹೆಚ್ಚಾಗಿದ್ದವು.

## ಸೋಲಿನ ಕಾರಣಗಳೇನು?

ನಿರ್ಧಾರಗಳು ವಿಫಲವಾಗಲು ಪ್ರಮುಖ ಕಾರಣ ನಮಗೆಲ್ಲಾ ಅದರ ನೆನಪೇ ಉಳಿಯದಿರುವುದು. ನೆನಪಾದರೂ ಹೇಗೆ ಉಳಿದೀತು ಹೇಳಿ?– ನಿರ್ಧಾರಗಳನ್ನು ತೆಗೆದುಕೊಳ್ಳುವ ಹೊಸ ವರ್ಷಾಚರಣೆಯ ಸಂಭ್ರಮದ ಸಮಯದಲ್ಲಿ ಪೂರ್ಣ ನಶೆಯಲ್ಲಿದ್ದಾಗ!

ಹೆಚ್ಚಿನವರಿಗೆ ಹೊಸ ವರ್ಷದ ನಿರ್ಧಾರಗಳನ್ನು ಮಾಡುವುದು ದಿನಾಚರಣೆಗಳನ್ನು ಆಚರಿಸುವಂತೆ ಒಂದು ಸಂಪ್ರದಾಯವಾಗಿರುತ್ತದೆ. ಹಾಗಾಗಿ ವಾಸ್ತವದ ಕಲ್ಪನೆಗಳಿಲ್ಲದೆ ಮಾಡಿದ ನಿರ್ಧಾರಗಳನ್ನು ಅವರ ಮನಸ್ಸೇ ಒಪ್ಪಿಕೊಂಡಿರುವುದಿಲ್ಲ. ನಿರ್ಧಾರಗಳನ್ನು ತೆಗೆದುಕೊಳ್ಳುವ ಸಮಯ ಬಂದಾಗ ನಮ್ಮ ಸಧ್ಯದ ಕೊರತೆಗಳು ಕಣ್ಣಿಗೆ ರಾಚುತ್ತವೆ. ಅವುಗಳನ್ನು ನೀಗಿಕೊಳ್ಳಲು ನಾವು ಕಟ್ಟಿರುವ ಕನಸುಗಳನ್ನೇ ನಮ್ಮ ನಿರ್ಧಾರ ಅಂದುಕೊಂಡಿರುತ್ತೇವೆ. ಉದಾಹರಣೆಗೆ ಮದುವೆಯಾಗದಿರುವ ಹುಡುಗನೊಬ್ಬ ಈ ವರ್ಷ ಒಳ್ಳೆಯ ಹುಡುಗಿಯನ್ನು ಪ್ರೀತಿಸಿ ಮದುವೆಯಾಗಬೇಕು ಎಂದು ನಿರ್ಧಾರ ಮಾಡಬಹುದು. ತನ್ನ ದೃಷ್ಟಿಯಲ್ಲಿ ಒಳ್ಳೆಯ ಹುಡುಗಿ ಅಂದರೆ ಹೇಗಿರಬೇಕು ಎನ್ನುವುದೇ ಅವನಿಗೆ ಗೊತ್ತಿಲ್ಲದಿರುವಾಗ ಮದುವೆಯಾದರೂ ಆಗದಿದ್ದರೂ ಅವನು ಬೇಸರದಲ್ಲಿಯೇ ಇರುತ್ತಾನೆ. ಈ ವರ್ಷ ಹೇಗಾದರೂ ಹೆಚ್ಚು ಹಣ ಗಳಿಸಬೇಕು ಎಂದು ನಿರ್ಧರಿಸುವವನಿಗೆ ಹೆಚ್ಚು ಎನ್ನುವುದರ ಬಗೆಗೆ ನಿಖರತೆ ಇರಬೇಕು ಮತ್ತು ಹೇಗೆ ಗಳಿಸಬೇಕು ಎನ್ನುವ ಯೋಜನೆ ಇರಬೇಕು.

ಇನ್ನು ಕೆಲವರಿಗೆ ನಾವು ನಿರ್ಧಾರಗಳನ್ನು ಮಾಡಿಬಿಟ್ಟರೆ ಅವು ಯಶಸ್ವಿಯಾಗಿಬಿಡುತ್ತವೆಯೇ ಎನ್ನುವ ಸಿನಿಕತನವಿರಬಹುದು. ಇದರಲ್ಲೂ ಸತ್ಯವಿದೆ. ಆದರೆ ನಿರ್ಧಾರಗಳೇ ಇಲ್ಲದ ಸ್ಥಿತಿಯಲ್ಲಿ ನಮಗೆ ಗೊತ್ತುಗುರಿಗಳೇ ಇರುವುದಿಲ್ಲ. ಆಗ ನಮಗೆ ಎಲ್ಲವೂ ಇದ್ದಾಗಲೂ ನಮ್ಮ ಕೊರಗು ಮಾತ್ರ ಮುಂದುವರಿದೇ ಇರುತ್ತದೆ. ಹಾಗಾಗಿ ಸೋಲುವ ಭಯದಿಂದ ನಿರ್ಧಾರಗಳನ್ನೇ ತೆಗೆದುಕೊಳ್ಳದೆ ಇರುವವರು ಇಲ್ಲಿನ ಜೀವನದಿಂದಲೇ ಓಡಿಹೋಗುತ್ತಿರುತ್ತಾರೆ. ಹೀಗೆ ವಾಸ್ತವವನ್ನು ಒಪ್ಪಿಕೊಳ್ಳಲಾರದ ಮತ್ತು ಬದಲಾವಣೆಗೆ ಸಿದ್ಧರಿಲ್ಲದ ಅವರು ತಮ್ಮೊಳಗೆ ನಿರಂತರ ಮಾನಸಿಕ ಕಿರಿಕಿರಿಗಳನ್ನು ತುಂಬಿಕೊಂಡು ಅವುಗಳಿಗೆ ನಶೆಯ ವಸ್ತುಗಳಲ್ಲಿ, ತಮ್ಮೊಳಗಿನ ಹಗಲುಗನಸುಗಳಲ್ಲಿ, ಅತಿಮಾನುಷ ಶಕ್ತಿಗಳಲ್ಲಿ ತಾತ್ಕಾಲಿಕ ಪರಿಹಾರ ಹುಡುಕುತ್ತಿರುತ್ತಾರೆ.

ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450